ಹೌದು 'ಅವಳು' ನಾನೇ ಆಗಿದ್ದೆ!

ನನಗೆ ನನ್ನ ತಂದೆಯ ನೆನಪಿಲ್ಲ! ಅಮ್ಮ ಒಬ್ಬಳೇ ಇಟ್ಟಿಗೆ ಗೂಡಲ್ಲಿ ಮೂಗಿಗೆ ಕವಡೆಕಟ್ಟಿಕೊಂಡು ದುಡಿಯುತ್ತಿದ್ದಳು. ನಾನು ಎಂಟ್ಹತ್ತು ವಯಸ್ಸಿಗೆ ಬರುವ ಹೊತ್ತಿಗೆ ನನ್ನಮ್ಮ ತನ್ನ ಜೊತೆ ಅದೇ ಇಟ್ಟಿಗೆ ಗೂಡಿಗೆ ನನ್ನನ್ನು ಕೂಲಿಗೆ ಕರೆದುಕೊಂಡು ಹೋದಳು. ಇಟ್ಟಿಗೆ ಗೂಡಿನ ಪಕ್ಕದಲ್ಲೇ ಒಂದು ಜೋಪಡಿಯನ್ನು ನಮ್ಮ ವಾಸಕ್ಕಾಗಿ ಅವನು ಕೊಟ್ಟಿದ್ದ. ಆಗ ಹಗಲೆಂದರೆ, ನಮಗೆ ಗೊತ್ತಿದ್ದು ದುಡಿತ ಒಂದೇ! ನನ್ನ ಕಣ್ಣ ಮುಂದೆಯೇ ಆ ಇಟ್ಟಿಗೆ ಗೂಡು ನನ್ನ ಬಾಲ್ಯವನ್ನು ದಹಿಸಿತು. ಇದೆಲ್ಲವನ್ನೂ ಅರೆಬರೆಯಾಗಿ ತಿಳಿಯುವ ವಯಸ್ಸು ನನ್ನದು. ಇಟ್ಟಿಗೆ ಸುಡಲು ಅಲ್ಲಿನ ಸುತ್ತಮುತ್ತಲ ಮಣ್ಣುಗುಡ್ಡೆಗಳು ಸವೆಯುವಂತೆ, ಅಮ್ಮನೂ ಆ ಮಣ್ಣಿನಂತೆಯೇ ನಿಧಾನವಾಗಿ ಸವೆಯತೊಡಗಿದಳು. ತನ್ನೊಳಗಿನದೆಲ್ಲವನ್ನೂ ಯಾರೊಂದಿಗೂ ಹೇಳಿಕೊಳ್ಳದ ಅಮ್ಮ ಒಳಗೊಳಗೇ ನೋವು ತಿನ್ನುವುದು ನನಗೆ ತಿಳಿಯುತ್ತಿತ್ತು. ಆದರೂ ನಾನು ಅಸಹಾಯಕಳಾಗಿದ್ದೆ! ಮಾತುಗಳಿಲ್ಲದೆ ಅವಳನ್ನು ಆರಾಧಿಸುತ್ತಿದ್ದೆ. ಇಟ್ಟಿಗೆ ಗೂಡಿನ ಕೆಲಸ ನನ್ನನ್ನು ಹೆಚ್ಚು ಜಡ್ಡುಗಟ್ಟಿಸಿತ್ತು. ಅಲ್ಲಿ ದುಡಿಯುತ್ತಿದ್ದವರೆಲ್ಲಾ ಹಗಲಿಗಿಂತ ರಾತ್ರಿಯಲ್ಲೇ ಹೆಚ್ಚು ಉಲ್ಲಾಸದಿಂದ ಇರುತ್ತಿದ್ದುದನ್ನು ಕಾಣುತ್ತಿದ್ದೆ. ನಾನೂ ಅವರಂತೆಯೇ! ಹಗಲಿಗಿಂತ ರಾತ್ರಿಯನ್ನೇ ಹೆಚ್ಚು ಪ್ರೀತಿಸುತ್ತಿದ್ದೆ. ಕಿಟಕಿಯ ಪಕ್ಕ ಮಲಗಿ, ದೂರದ ನಕ್ಷತ್ರಗಳನ್ನು ರೆಪ್ಪೆ ಮುಚ್ಚದೆ ನೋಡುತ್ತಾ ಹಗಲಿನ ದಣಿವನ್ನು ಮರೆಯುತ್ತಿದ್ದೆ. ಕಿಟಕಿಯಾಚೆ ರಾಶಿ ರಾಶಿ ಮಿಂಚುಹುಳುಗಳು ರಾತ್ರಿಯನ್ನು ಬೆಳಗಲು ಇನ್ನಿಲ್ಲದಂತೆ ಹಾರಾಡುತ್ತಿದ್ದನ್ನು ನೋಡಿ ಸಂತಸಪಡುತ್ತಿದ್ದೆ. ಒಮ್ಮೊಮ್ಮೆ ಅವುಗಳ ನಡುವೆ ನಾನೂ ಹೋಗಿ ಸೇರಿಕೊಳ್ಳುತ್ತಿದ್ದೆ. ಮಿಂಚುಹುಳುಗಳು ನನ್ನ ಕೈ ಹಿಡಿದು ಮೊರೆಯುವ ಕತ್ತಲಿನ ರಾಶಿಗೆ ಕರೆದೊಯ್ಯುತ್ತಿದವು. ಕತ್ತಲನ್ನು ಬೆಳಗುವ ಪ್ರಯತ್ನದಲ್ಲಿ ಅವುಗಳ ಜೊತೆ ಸೇರಿಕೊಳ್ಳುತ್ತಿದ್ದೆ. ಬೆಳಕನ್ನು ಚೆಲ್ಲುತ್ತಾ ಹಾರುತ್ತಿದ್ದೆ. ಒಮ್ಮೊಮ್ಮೆ ಕಿಟಕಿಯಾಚೆ ಬೆಳಗುತ್ತಿದ್ದ ಚಂದಿರನ ಕಡೆ ಕೈ ಚಾಚುತ್ತಿದ್ದೆ. ಕೈ ಚಾಚಿದಷ್ಟೂ ಚಂದಿರ ನನ್ನಿಂದ ದೂರ ಬಹುದೂರ ಸಾಗುತ್ತಿದ್ದ! ಆದರೂ ನನ್ನ ಕೈಗಳು ದಣಿಯದೆ ಚಂದಿರನಿದ್ದ ಆಕಾಶದ ಕಡೆಗೆ ಬಳ್ಳಿಯಂತೆ ಬೆಳೆಯುತ್ತಾ ಹೋಗುತ್ತಿದ್ದವು. ನನ್ನ ಕೈ ಮೇಲೆ ಶೀತಲ ಶರತ್ಕಾಲದ ಬಳ್ಳಿಗಳು, ಹೂವಿನ ತೆಕ್ಕೆಗೆ ಬಂದು ಮೈಮರೆಯುತ್ತಿದ್ದ ಚಿಟ್ಟೆಗಳು, ಮೋಡಗಳೊಂದಿಗೆ ಸಖ್ಯ ಬೆಳೆಸಲು ಹಾತೊರೆಯುತ್ತಿದ್ದ ಎತ್ತರದ ವೃಕ್ಷಗಳು, ಹಲವು ಬಣ್ಣಗಳ ವಸಂತದ ಚಿಗುರು, ಮಳೆಯ ಹೆಜ್ಜೆಗುರುತುಗಳೆಲ್ಲಾ ಮೂಡಿ ಸಂತಸದಿಂದ ಮೈಮರೆತು ಹಾಡುತ್ತಿದ್ದವು. ಇನ್ನೇನು ನನ್ನ ಬೆರಳ ತುದಿ ಚಂದಿರನನ್ನು ಮುಟ್ಟಬೇಕೆನಿಸುವಷ್ಟರಲ್ಲಿ... ಪಕ್ಕದಲ್ಲಿ ಅಮ್ಮನ ನರಳಾಟ ನನ್ನನ್ನು ಎಚ್ಚರಗೊಳಿಸಿಬಿಡುತ್ತಿತ್ತು!

ಅಮ್ಮನ ಸಮಾಧಿಯ ಮೇಲೆ ಬಂದವರೆಲ್ಲಾ ಮೂರು ಹಿಡಿ ಮಣ್ಣು ಹುಯ್ದು ಮರಳಿ ನೋಡದೆ ತೆರಳಿದರು. ಮಣ್ಣಿನೊಂದಿಗೆ ಬೆಸೆದಿದ್ದ ಅಮ್ಮನ ಸಂಬಂಧವನ್ನು ಸಾವು ಕಡಿದುಹಾಕಿರಲಿಲ್ಲ. ಅಮ್ಮ ಅಲ್ಲಿನ ಮಣ್ಣಿನೊಂದಿಗೆ ಕರಗಿಹೋದಳು. ಗಾಳಿಯಲ್ಲಿ ತೂರಿ ಬಂದ ನಕ್ಷತ್ರಗಳು, ಅಮ್ಮನ ಗುಂಡಿಯ ಮೇಲೆ ತಮ್ಮ ಬೆಳಕಿನ ಗರಿಯುದುರಿಸಿ, ಅಂತಿಮ ವಿದಾಯ ಹೇಳಿ ಭಾರವಾದ ಕಣ್ಣುಗಳಿಂದ ಬಂದ ದಿಕ್ಕಿನಲ್ಲೇ ಹೊರಟು ಹೋದವು.

ಈಗ ನಿಜಕ್ಕೂ ನಾನು ಒಬ್ಬಂಟಿ.

'ಉರಿವ ದೀಪದ ಕೆಳಗೆ ಮಲಗಿರುವ ತಾಯೆ, ನಿನ್ನ ಎದೆಯೊಳಗೆ ಉರಿಯುತ್ತಿದ್ದ ಬೆಂಕಿ ಈಗ ತಣ್ಣಗಾಗಿದೆ. ನೀ ಪಟ್ಟ ಅವಿರತ ಸಂಕಟಗಳನ್ನು ಹೇಗೆ ಮರೆಯಲಿ! ಎಲ್ಲ ನೋವನ್ನೂ ನನ್ನೊಳಗೆ ಕಾಪಾಡಿಕೊಂಡಿದ್ದೇನೆ ತಾಯೆ, ನೀನು ಈ ಭೂಮಿಯನ್ನು ತೊರೆದಮೇಲೆ.

ನನ್ನತ್ತ ಸಿಡಿದುಬಂದ ಕಣ್ಣುಗಳೆಷ್ಟೋ! ಬಿಗಿಯಲು ಬಂದ ಕೈಗಳೆಷ್ಟೋ!